ಎಂ.ವಿ.ಸಿ - 1071/2023
ಪಿ.ಡಬ್ಲ್ಯು. - 01

**ದಿನಾಂಕ 20-03-2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲು - 2 ನೇ ಎದುರುದಾರರ ಪರ ಶ್ರೀ ಡಿ.ಬಿ.ಎಸ್ ವಕೀಲರಿಂದಃ**

ಮೃತಳು ನನ್ನ ತಾಯಿಯಾಗಿರುತ್ತಾರೆ . ನನ್ನ ತಾಯಿಗೆ 3 ಜನ ಮಕ್ಕಳು . ನನ್ನ ತಾಯಿಗೆ ಇಬ್ಬರು ಹೆಣ್ಣುಮಕ್ಕಳು ಮತ್ತು ಒಂದು ಗಂಡು ಮಗು ಅವರ ಹೆಸರು ಶಶಿ ಪ್ರಭಾ, ರೇವತಿ ಮತ್ತು ನಾನು. ಇಬ್ಬರು ಹೆಣ್ಣುಮಕ್ಕಳು ಮದುವೆಯಾಗಿ ಅವರ ಗಂಡನ ಮನೆಯಲ್ಲಿ ವಾಸವಾಗಿರುತ್ತಾರೆ . ನನಗೆ ಮದುವೆಯಾಗಿಲ್ಲ . ನಾನು ಬೇರೆ ಕಡೆ ವಾಸ ಮಾಡುತಿದ್ದೇನೆ ಎಂದರೆ ಸರಿಯಲ್ಲ . ನಾನು ಸ್ವತಂತ್ರವಾಗಿ ನನ್ನ ಸಂಪಾದನೆಯ ಮೇಲೆ ಜೀವನ ನಡೆಸುತಿದ್ದೇನೆ ಎಂದರೆ ಸರಿ . ನನಗೆ ಮತ್ತು ನನ್ನ ಸಹೋದರಿಯರ ನಡುವೆ ಒಳ್ಳೆಯ ಬಾಂದವ್ಯ ಇದೆ . ನನ್ನ ಅಕ್ಕ ತಂಗಿಯವರು ಮದುವೆಯಾಗಿ ಅವರ ಅವರ ಗಂಡನ ಮನೆಯಲ್ಲಿ ವಾಸವಾಗಿರುವುದರಿಂದ ಅವರನ್ನು ಪಕ್ಷಗಾರರನ್ನಾಗಿ ಮಾಡಿರುವುದಿಲ್ಲ ಮತ್ತು ಅವರಿಗೆ ಹಕ್ಕು ಇಲ್ಲ . ಈ ಅರ್ಜಿಯನ್ನು ಹಾಕಿರುವ ವಿಚಾರ ನನ್ನ ಅಕ್ಕ ತಂಗಿಯರಿಗೆ ಗೊತ್ತಿರುತ್ತದೆ . ನಾನು ದುರ್ಲಾಭ ಪಡೆಯಲು ನನ್ನ ಅಕ್ಕ ತಂಗಿಯರನ್ನು ಪಕ್ಷಗಾರರನ್ನಾಗಿ ಮಾಡದೇ ಈ ಅರ್ಜಿ ಹಾಕಿರುತ್ತೇನೆ ಎಂದರೆ ಸರಿಯಲ್ಲ .ತಾಯಿ ನನ್ನ ಜೊತೆಯಲ್ಲಿ ವಾಸ ಇದ್ದರು . ತಾಯಿಯನ್ನು ನಾನು ನೋಡಿಕೊಳ್ಳುತಿದ್ದೆ ಮತ್ತು ನನ್ನ ತಾಯಿ ಕೂಡ ಕೆಲಸಕ್ಕೆ ಹೋಗುತಿದ್ದರು . ನನ್ನ ತಾಯಿ ಕೂಲಿ ಕೆಲಸಕ್ಕೆ ಹೋಗುತಿದ್ದರು . ನನ್ನ ತಾಯಿ ಕೆಲಸಕ್ಕೆ ಹೋಗುತಿದ್ದ ಬಗ್ಗೆ ದಾಖಲೆ ಇಲ್ಲ. ಎಷ್ಟು ಸಂಪಾದನೆ ನನ್ನ ತಾಯಿಗೆ ಇತ್ತು ಎನ್ನುವ ಬಗ್ಗೆ ದಾಖಲೆ ಇಲ್ಲ . ನನ್ನ ತಾಯಿಯ ಆರೋಗ್ಯ ಚೆನ್ನಾಗಿತ್ತು . ನನ್ನ ತಾಯಿ ಆಸ್ಪತ್ರೆಗೆ ಚಿಕಿತ್ಸೆ ಗಾಗಿ ಹೋಗುತಿದ್ದಾಗ ಅಪಘಾತ ಆಯಿತು ಎಂದರೆ ಸರಿ. ನನ್ನ ತಾಯಿ ಕಳೆದ 4-5 ವರ್ಷಗಳಿಂದ ಹುಷಾರು ಇಲ್ಲದೇ ಮನೆಯಲ್ಲಿಯೇ ಇದ್ದರು ಎಂದರೆ ಸರಿಯಲ್ಲ . ನನ್ನ ತಾಯಿ ಕೆಲಸ ಮಾಡುತಿದ್ದರು ಎಂದು ಸುಳ್ಳು ಹೇಳುತಿದ್ದೇನೆ ಎಂದರೆ ಸರಿಯಲ್ಲ . ಅಪಘಾತದ ಸಮಯದಲ್ಲಿ ನನ್ನ ತಾಯಿಗೆ 54 ವರ್ಷ ವಯಸ್ಸು ಆಗಿತ್ತು . ನನ್ನ ಸಹೋದರಿಯ ಪೈಕಿ ನನ್ನ ಅಕ್ಕನಿಗೆ 37 ವರ್ಷ . ನನ್ನ ತಾಯಿಯ ಜನ್ಮ

ದಿನಾಂಕ ತೋರಿಸಲು ನನ್ನ ಬಳಿ ಯಾವುದೇ ದಾಖಲೆ ಇಲ್ಲ. ನನ್ನ ತಾಯಿಗೆ ಅಪಘಾತ ಆಗುವಾಗ 70 ವರ್ಷ ವಯಸ್ಸು ಆಗಿತ್ತು ಎಂದರೆ ಸರಿಯಲ್ಲ .

ನನ್ನ ತಾಯಿ ಪ್ರಯಾಣ ಮಾಡುತಿದ್ದ ಆಟೋ ರಿಕ್ಷಾ ಮುಂದೆ ಹೋಗುತಿದ್ದ ವಾಹನಕ್ಕೆ ಡಿಕ್ಕಿಪಡಿಸಿ ಅಪಘಾತವಾಗಿ ನನ್ನ ತಾಯಿ ತೀರಿಕೊಂಡರು ಎಂದರೆ ಸಾಕ್ಷಿ ಸದ್ರಿ ವಾಹನ ಒವರ್ ಟೇಕ್ ಮಾಡಿ ಒಮ್ಮೆಲೇ ನಿಲ್ಲಿಸಿದ್ದರಿಂದ ಅಪಘಾತವಾಯಿತು ಎಂದು ತಿಳಿಸಿರುತ್ತಾರೆ . ಮೇಲೆ ಹೇಳಿದ ರೀತಿ ಅಪಘಾತವಾಯಿತು ಎಂದು ಸ್ಥಳದ ಬಳಿ ಇದ್ದ ಗ್ಯಾರೇಜ್ ನವರು ಹೇಳಿರುತ್ತಾರೆ . ಅಪಘಾತ ಸ್ಥಳದ ರಸ್ತೆಯ ಮದ್ಯಭಾಗದಲ್ಲಿ ಡಿವೈಡರ್ ಇರುತ್ತದೆ, ಡಿವೈಡರ್ ನ ಎಡ ಮತ್ತು ಬಲಕ್ಕೆ ರಸ್ತೆಯು ತಲಾ 25 ಅಡಿ ಅಗಲವಿತ್ತು. ಅಪಘಾತದ ದಿನ ನನ್ನ ತಾಯಿ ಉಡುಪಿಯಿಂದ ಕಾಪು ಕಡೆಗೆ ಹೋಗುತಿದ್ದರು . ರಸ್ತೆಯ ಡಿವೈಡರ್ ನಿಂದ ಪೂರ್ವ ಬದಿಗೆ 20 ಅಡಿ ದೂರದಲ್ಲಿ ಅಪಘಾತವಾಗಿರುತ್ತದೆ. ಅಪಘಾತ ನನ್ನ ತಾಯಿ ಹೋಗುತಿದ್ದ ಆಟೋ ರಿಕ್ಷಾ ಚಾಲಕನ ತಪ್ಪಿನಿಂದ ಅಪಘಾತ ಆಗಿದೆ ಎಂದರೆ ಸರಿಯಲ್ಲ . ಆಟೋ ಚಾಲಕ ನನ್ನ ಪರಿಚಯಸ್ಥ. ನನ್ನ ಮತ್ತು ಆತನ ನಡುವೆ ಅನ್ಯೋನ್ಯತೆ ಇಲ್ಲ . ಆಟೋ ಚಾಲಕ ನನ್ನ ಪರಿಚಯಸ್ಥನಾಗಿದ್ದರಿಂದ ಆತನ ತಪ್ಪು ಇದ್ದರೂ ಕೂಡ ಆತನನ್ನು ಈ ಅರ್ಜಿಯಲ್ಲಿ ಪಕ್ಷಗಾರರನ್ನಾಗಿ ಮಾಡಿಲ್ಲ ಎಂದರೆ ಸರಿಯಲ್ಲ . ಈ ಅಪಘಾತಕ್ಕೆ ಒಂದನೇ ಎದುರುದಾರರ ವಾಹನ ಕಾರಣವಲ್ಲ ಎಂದರೆ ಸರಿಯಲ್ಲ. ಎದುರುದಾರರು ಯಾವುದೇ ಪರಿಹಾರ ನೀಡಲು ಬಾಧ್ಯಸ್ಥರಲ್ಲ ಎಂದರೆ ಸರಿಯಲ್ಲ.ನನ್ನ ಸಾಕ್ಷ್ಯ ಪ್ರಮಾಣ ಪತ್ರದಲ್ಲಿ ಹೇಳಿರುವಂತೆ ವೈದ್ಯಕೀಯ ಖರ್ಚು,ಓಡಾಟಕ್ಕೆ, ಶವಸಂಸ್ಕಾರಕ್ಕೆ , ಶವಸಾಗಾಟಕ್ಕೆ ಖರ್ಚಾಗಿಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆ - ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಸಾಕ್ಷ್ಯವನ್ನು ನನ್ನ ಉಕ್ತಲೇಖನದ ಮೂಲಕ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ. ಸ ಇದೆ ಎಂದು ಒಪ್ಪಿದರು

ಪ್ರ. ಹಿ. ಸಿ. ನ್ಯಾ. ಉಡುಪಿ.